# ಬೋಧಕರ ವಿವರ

೧. ಹೆಸರು : ಡಿ.ಪಾಂಡುರಂಗ ಬಾಬು

೨. ಜನ್ಮ ದಿನಾಂಕ : ೧೬.೦೭.೧೯೬೨

೩. ವಿದ್ಯಾರ್ಹತೆ : ಎಂ.ಎ., ಪಿಎಚ್.ಡಿ

೪. ವಿಳಾಸ : ನಂ ೧೪೯೧, ೩೧ನೇ ವಾರ್ಡ್‌ಗಾಂಧಿಕಾಲೋನಿ, ಹೊಸಪೇಟೆ

೫. ಮೊಬೈಲ್ ಸಂಖ್ಯೆ : ೯೪೪೯೭೭೦೩೬೧

೬. ಇ-ಮೇಲ್ ವಿಳಾಸ : dpbabu@gmail.com

೭. ಕಾರ್ಯನಿರ್ವಹಿಸುತ್ತಿರುವ ವಿಭಾಗ : ಕನ್ನಡ ಭಾಷಾಧ್ಯಯನ ವಿಭಾಗ

೮. ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಹುದ್ದೆ : ಪ್ರಾಧ್ಯಾಪಕ

೯. ವಿಷಯ ತಜ್ಞತೆ
೧. ಭಾಷಾವಿಜ್ಞಾನ
೨. ಭಾಷಾಪ್ರಭೇಧಗಳು
೩. ಸಾಮಾಜಿಕ ಭಾಷಾವಿಜ್ಞಾನ

೧೦. ಅಧ್ಯಯನ ನಡೆಸುತ್ತಿರುವ ಆಸಕ್ತಿಯ ಕ್ಷೇತ್ರಗಳು
೧. ಭಾಷೆ ಮತ್ತು ಸಮಾಜ
೨. ಉಪಭಾಷೆಗಳು
೩. ಸ್ಥಳನಾಮ
೪. ವ್ಯಕ್ತಿನಾಮ
೫. ಕನ್ನಡ ಭಾಷಾಬಳಕೆ

೧೧. ಯೋಜನೆಗಳ ವಿವರ

೧೧.೧. ಪೂರ್ಣಗೊಳಿಸಿದ ಸಾಂಸ್ಥಿಕ ಯೋಜನೆಗಳು

೧. ಕೃಷಿ ಪದಕೋಶ

ಈ ಪದಕೋಶದಲ್ಲಿ ಕೃಷಿಗೆ ಸಂಬಂಧಿಸಿದಂತೆ ಕರ್ನಾಟಕದ ಎಲ್ಲಾ ಭಾಗಗಳಿಂದಲೂ ಪದಗಳನ್ನು ಸಂಗ್ರಹಿಸಲಾಗಿದೆ. ಸಂಗ್ರಹಿತ ಪದಗಳನ್ನು ಬೇರೆ ಬೇರೆ ಅರ್ಥವಲಯಗಳಲ್ಲಿ ವಿಭಾಗ ಮಾಡಿ ಸಂಕಲಿಸಲಾಗಿದೆ. ಕನ್ನಡ ಪದಕೋಶ ನಿರ್ದಿಷ್ಟ ವಲಯವೊಂದನ್ನು ಕೇಂದ್ರೀಕರಿಸಿ ರೂಪಿಸಿರುವ ಈ ಕೋಶದಲ್ಲಿ ಸಾಧ್ಯವಾದಷ್ಟು ಪ್ರಾದೇಶಿಕ ವ್ಯತ್ಯಾಸಗಳನ್ನು ಒಂದೇ ಅರ್ಥದಲ್ಲಿ ಬಳಕೆಯಲ್ಲಿರುವ ಬೇರೆ ಬೇರೆ ಪದಕೋಶಗಳನ್ನು ಸಾಧಿತರೂಪಗಳನ್ನು ದಾಖಲಿಸಲಾಗಿದೆ.

ಉದಾ. ೧ ಹುಚ್ಚೆಳ್ಳು, ಗುರೆಳ್ಳು, ಕುರೇಸಾಣಿ
೨. ನೆಲ್ಲು, ಬತ್ತ
೩. ಗಾಡಿ, ಚಕ್ಕಡಿ, ಬಂಡಿ ಈ ಬಗೆಯ ರೂಪ ವ್ಯತ್ಯಾಗಳನ್ನೂ

ಕುಂಟೆ, ಕುಂಟಿ, ಗುಂಟ್ವೆ. ಗುಂಟೆ ಮಾದರಿಯ ಧ್ವನಿ ವ್ಯತ್ಯಾಸಗಳನೂ ದಾಖಲಿಸಿದೆ.

ಉಪಕರಣ, ಭೂಮಿ, ನೀರಾವರಿ, ಗೊಬ್ಬರ, ಬೆಳೆಗಳು, ಮಳೆ ಮತ್ತು ಹವಾಮಾನ, ಕಳೆಗಳು, ರೋಗಳು, ನಂಬಿಕೆ, ದೈವ, ಆಚರಣೆಗಳು, ಆರ್ಥಿಕ ನೆಲೆಗಳು, ಆಡಳಿತ, ಮಾರುಕಟ್ಟೆ, ಅಳತೆಮಾಪನ, ಕ್ರಿಯಾಪದಗಳನ್ನೂ ಪ್ರಧಾನ ವಲಯವನ್ನಾಗಿ ವಿಂಗಡಿಸಿ ಕೃಷಿಪದಕೋಶವನ್ನು ರೂಪಿಸಲಾಗಿದೆ.

೨. ಭಾಷೆ ವಿಶ್ವಕೋಶ



PDF created with pdfFactory trial version www.pdffactory.com

ಇದು ಕನ್ನಡದಲ್ಲಿ ಪ್ರಕಟವಾಗಿರುವ ಭಾಷೆಗೆ ಸಂಬಂಧಿಸಿದ ಮೊದಲ ವಿಷಯ ವಿಶ್ವಕೋಶ. ಡೇವಿಡ್ ಕ್ರಿಸ್ಟಲ್ ಅವರ ದಿ ಕೇಂಬ್ರಿಡ್ಜ್ ಎನ್‌ಸೈಕ್ಲೋಪೀಡಿಯಾ ಆಫ್‌ಲಾಂಗ್ವೇಜ್ (೧೯೮೩) ಕೃತಿಯನ್ನು ಮಾದರಿಯಾಗಿರಿಸಿಕೊಂಡು ರೂಪಿಸಲಾಗಿದೆ. ಆದರೂ ಕನ್ನಡ ಹಾಗೂ ಭಾರತೀಯ ಸಂದರ್ಭಕ್ಕೆ ವಿವರ ಹಾಗೂ ಉದಾಹರಣೆಗಳನ್ನು ಬಳಸಿಕೊಳ್ಳಲು ಸಾಧ್ಯವಿರುವೆಡೆ ಬಳಸಲಾಗಿದೆ. ಈ ವಿಶ್ವಕೋಶವು ಸಾಮಾನ್ಯ ಓದುಗರಿಗಾಗಿ ಹಾಗೂ ತಜ್ಞ ವಿಷಯ ಮಂಡನೆಯೂ ವಿಷಯ ತಜ್ಞರಿಗಾಗಿ ಇರದೆ ವಿಷಯ ಪ್ರವೇಶವನ್ನು ಬಯಸುವವರಿಗಾಗಿ ಅನುವಾಗುವಂತೆ ತಾತ್ವಿಕ ವಿಚಾರಗಳನ್ನು ಸರಳವಾಗಿ ನಿರೂಪಿಸಲಾಗಿದೆ. ನಮ್ಮ ತಿಳಿವಿನಲ್ಲಿ ಭಾಷೆ, ಭಾಷೆಯೆಂಬ ಕನ್ನಡಿ, ಭಾಷೆಯ ರಚನೆ, ಮಾತನಾಡುವುದು, ಮತ್ತು ಕೇಳಿಸಿಕೊಳ್ಳುವುದು, ಓದು ಬರಹ, ಸಂಕೇತ ಭಾಷೆ, ಭಾಷೆಯ ಕಲಿಕೆ, ಭಾಷೆ ಮೆದುಳು ವಿಕಲತೆ, ಲೋಕದ ಭಾಷೆಗಳು ಎಂಬ ಹತ್ತು ಪ್ರಧಾನ ಭಾಗಗಳಲ್ಲಿ ಅರವತ್ತೆಂಟು ಲೇಖನಗಳನ್ನು ಒಳಗೊಂಡಿದೆ.

೩. ಕನ್ನಡದಲ್ಲಿ ಇಂಗ್ಲಿಶ್ ಪದಕೋಶ

ಇದೊಂದು ವಿಶಿಷ್ಟ ಯೋಜನೆಯಾಗಿದ್ದು, ಕನ್ನಡ ಮಾತನಾಡುವಾಗ ಸಾಮಾನ್ಯ ಮಾತಿನ ನೆಲೆಗಳಲ್ಲಿ ಬಳಕೆಯಾಗುತ್ತಿರುವ ಇಂಗ್ಲಿಶ್ ಪದಗಳೆಲ್ಲಾ ಮೂಲ ಇಂಗ್ಲಿಶ್‌ನಲ್ಲಿನ ಅರ್ಥ ಛಾಯೆಗಳಿಗಿಂತ ಭಿನ್ನವಾಗಿ ವಿಭಿನ್ನ ಅರ್ಥ ಛಾಯೆಗಳನ್ನು ಪಡೆದುಕೊಂಡಿವೆ. ಹಾಗಯೇ ಅನೇಕ ರೂಪವ್ಯತ್ಯಾಸಗಳೊಂದಿಗೆ ಅದು ಯಾವ ಮೂಲದ ತಿಳಿಯದೆ ಮಟ್ಟಿಗೆ ಕನ್ನಡದೊಳಗೆ ಸಮೀಕರಣಗೊಂಡಿವೆ. ಹಾಗೆಯೇ ಅಕ್ಷರಸ್ತರ ಬಳಕೆ, ಇಂಗ್ಲಿಶ್ ಬಲ್ಲವರ ಬಳಕೆ, ಹಾಗೂ ಅನಕ್ಷರಸ್ತರ ಬಳಕೆಯಲ್ಲಿ ಬೇರೆ ಬೇರೆ ರೂಪ ಅರ್ಥಗಳಲ್ಲಿ ಕನ್ನಡದೊಂದಿಗೆ ಇಂಗ್ಲಿಶ್ ಪದಗಳು ಬಳಕೆಯಾಗುತ್ತಿವೆ. ಕನ್ನಡದೊಳಗೆ ಬಳಕೆಯಾಗುತ್ತಿರುವ ಇಂತಹ ಇಂಗ್ಲಿಶ್ ಪದಗಳನ್ನೆಲ್ಲ ಕನ್ನಡದ ಬಳಕೆಯ ಸಂದರ್ಭದ ಅರ್ಥ ಹಾಗೂ ಭಿನ್ನ ರೂಪಬೇಧಗಳೊಂದಿಗೆ ಈ ಯೋಜನೆಯಲ್ಲಿ ಪ್ರಯೋಗಗಳ ಸಹಿತ ಸಂಕಲಿಸಲಾಗಿದೆ. ಉದಾ: ಫಿಟಂಗ್–ಕಿತಾಪತಿ, ಫ್ಯಾಮಿಲಿ–ಹೆಂಡತಿ, ಫೋನ್–ಮೋನು, ವೇಸ್ಟ್‌ಬಾಡಿ–ಕೆಲಸಕ್ಕೆ ಬಾರದ ವ್ಯಕ್ತಿ ಇತ್ಯಾದಿ....

೪. ಬಳಕೆ ಕನ್ನಡ ಕೋಶ

ಇದೊಂದು ವಿಶಿಷ್ಟ ಪದಕೋಶ ಕನ್ನಡದ ಬಳಕೆಯ ವಲಯಗಳೂ ಮತ್ತು ಕನ್ನಡವನ್ನು ಬಳಸುವವರ ಸಂಖ್ಯೆ ಹಿಗ್ಗುತ್ತಿರುವ ಈ ಸಂದರ್ಭದಲ್ಲಿ ಕನ್ನಡವನ್ನು ಬಳಸುವಾಗ ಕನ್ನಡ ಬಳಸುವಾಗ ಉಂಟಾಗುವ ಸಂದೇಹ ಹಾಗೂ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಲು ಕನ್ನಡ ಬಳಕೆಯು ಸರಾಗವಾಗುಂತೆ ಮಾಡಲು ಪ್ರಯತ್ನಿಸಲಾಗಿದೆ. ಕನ್ನಡದಲ್ಲಿ ದಿನವೂ ಬಳಕೆಯಾಗುತ್ತಿರುವ ಸಂಸ್ಕೃತ ಪದಗಳಿಗೆ ಕನ್ನಡದಲ್ಲಿ ಇರುವ ಬದಲೀ ಪದಗಳನ್ನು ದಾಖಲಿಸಿದೆ. ವಾಚ್ಯಾರ್ಥದ ಜತೆಗೆ ಲಕ್ಷ್ಮಣಾರ್ಥವುಳ್ಳ ಪದಗಳೂ, ಜೋಡಿ ಪದಗಳು, ನುಡಿಗಟ್ಟುಗಳು, ವಿಶೇಷ ಕ್ರಿಯಾರಚನೆಗಳು, ಹಾಗೂ ಬರಹದಲ್ಲಿ ಹಾಗೂ ಬಳಕೆಯಲ್ಲಿರಬಹುದಾದ ವಿವಿಧ ರೂಪಗಳಲ್ಲಿ ಹೆಚ್ಚು ಸೂಕ್ತವಾದ ಸಾಧು ರೂಪಗಳನ್ನು ಈ ಕೋಶದಲ್ಲಿ ಸಂಕಲಿಸಿದೆ.

**೧೧.೨. ಪೂರ್ಣಗೊಳಿಸಿದ ವೈಯಕ್ತಿಕ ಯೋಜನೆಗಳು**

**೧. ಪಾಂಚಾಳ ವೃತ್ತಿ ಪದಕೋಶ**

ಕರ್ನಾಟಕದ ಪ್ರಮುಖ ಆಯಗಾರ ಸಮುದಾಯವಾದ ಪಾಂಚಾಳರ ವೃತ್ತಿಪದಕೋಶ, ಅಕ್ಕಸಾಲಿಗರು, ಬಡಿಗರು, ಕಮ್ಮಾರರು, ಶಿಲ್ಪಿಗಳು, ಮತ್ತು ಕಂಚುಗಾರರ ವೃತ್ತಿ ವಲಯದಲ್ಲಿ ಬಳಸುವ ಕನ್ನಡ ಪದಗಳ ಸಂಗ್ರಹ, ಉಪಕರಣಗಳು, ನಿರ್ಮಾಣಗಳು, ದೈವನಂಬಿಕೆ, ರೋಗನಿಷೇಧಗಳು, ಸಂಕೀರ್ಣ ಎಂಬ ಐದು ಪ್ರತ್ಯೇಕ ವಿಭಾಗಗಳಲ್ಲಿ ಪದಗಳನ್ನು ಅರ್ಥ ಸಹಿತವಾಗಿ ದಾಖಲಿಸಲಾಗಿದೆ. ವೃತ್ತಿ ಪದಗಳು ಒಂದು ಭಾಷೆಯ ಪದಕೋಶದ ಭಾಗವೇ ಆದರೂ ಅದು ಇಡೀ ಭಾಷಿಕರಲ್ಲಿ ಬಳಕೆಯಲ್ಲಿರುವುದಿಲ್ಲ, ವೃತ್ತಿ ವಲಯದಲ್ಲಿ ವಿಸ್ತೃತವಾದ ಬಳಕೆಯ ರೂಪಗಳು ಸಾದಿತ ರೂಪಗಳೂ ಬಳಕೆಯಲ್ಲಿರುತ್ತವೆ. ಇಂತಹ ಎಲ್ಲಾ ಪದರೂಪಗಳನ್ನು ಈ ಕೃತಿಯಲ್ಲಿ ಸಂಕಲಿಸಲಾಗಿದೆ.

**೨ ಗ್ರಾಮೀಣ ಆಟಗಳ ಪದ ವೈಶಿಷ್ಟ್ಯ**

ಗ್ರಾಮೀಣ ಆಟಗಳು ಸ್ಥಳೀಯವಾಗಿ ದೊರೆಯುವ ವಸ್ತುಗಳು ಹಾಗೂ ಸರಳ ನಿಯಮಗಳನ್ನು ಅನುಸರಿಸಿ ಮನರಂಜನೆ, ಆಚರಣೆ, ಧಾರ್ಮಿಕ ಉದ್ದೇಶಗಳಿಗಾಗಿ ಆಡುವ ಆಟಗಳಾಗಿರುತ್ತವೆ. ಮೇಲ್ನೊಟಕ್ಕೆ ಆಟಗಳು ಸರಳವೇ ಆಗಿ ಕಂಡರೂ ಈ ಆಟಗಳು ಆಯಾ ಪರಿಸರದ ಸಾಮಾಜಿಕ, ಸಾಂಸ್ಕೃತಿಕ ವಿವರಗಳನ್ನು ಪ್ರತಿಫಲಿಸುತ್ತಿರುತ್ತವೆ. ಈ ಯೋಜನೆಯಲ್ಲಿ ಒಳಾಂಗಣ ಆಟಗಳು, ಮಕ್ಕಳ ಆಟಗಳಿಂದ ಪದಗಳನ್ನು ಸಂಗ್ರಹಿಸಲಾಗಿದೆ. ಆಟದ ವಸ್ತುಗಳ ಹೆಸರುಗಳು ನಿಯಮಗಳು ಹೆಸರುಗಳು ಆಟದ ಹೆಸರುಗಳನ್ನು ಸಂಗ್ರಹಿಸಿ ವಿವರಿಸುವ ಪ್ರಯತ್ನವಾಗಿದೆ.



PDF created with pdfFactory trial version www.pdffactory.com

**೩. ತ.ರಾ.ಸು**

ಚಿತ್ರದುರ್ಗಕ್ಕೆ ಸಂಬಂಧಿಸಿದ ಐತಿಹಾಸಿಕ ಕಾದಂಬರಿಗಳ ಕರ್ತೃ ಹಾಗೂ ಕನ್ನಡದ ಪ್ರಗತಿಶೀಲ ಸಾಹಿತ್ಯದ ಪ್ರಮುಖ ಲೇಖಕರಲ್ಲಿ ಒಬ್ಬರಾದ ತ.ರಾ.ಸು ಎಂದು ಖ್ಯಾತರಾದ ತಳುಕಿನ ರಾಮಸ್ವಾಮಯ್ಯ ಸುಬ್ಬರಾವ್ ಇವರ ಬದುಬರಹಗಳ ಸ್ಥೂಲ ಪರಿಚಯದ ಕೃತಿ. ತ.ರಾ.ಸು ರವರ ಕಾದಂಬರಿ, ನಾಟಕ. ಸಣ್ಣಕತೆಗಳ ಕಿರುಪರಿಚಯ ಹಾಗೂ ಇವರ ಸಾಹಿತ್ಯ ಕೃತಿಗಳ ಕುರಿತು ವಿವಿಧ ಲೇಖಕರ ಹಾಗೂ ವಿಮರ್ಶಕರ ಅಭಿಪ್ರಾಯಗಳನ್ನು ಕ್ರೋಡೀಕರಿಸಲಾಗಿದೆ. ತ.ರಾ.ಸು ರವರ ಸಮಗ್ರ ಸಾಹಿತ್ಯ ಕೃತಿಗಳ ಪಟ್ಟಿಯನ್ನು ಒದಗಿಸಲಾಗಿದೆ.

**೪. ಕನ್ನಡ ಪಠ್ಯಪುಸ್ತಕಗಳ ಪರಿಷ್ಕರಣೆ**

ಕರ್ನಾಟಕದ ಶಿಕ್ಷಣ ಇಲಾಖೆ ವಿಶ್ವವಿದ್ಯಾಲಯದ ಮೂಲಕ ಪ್ರಾಯೋಜಿಸಿದ ಈ ಯೋಜನೆಯಲ್ಲಿ ಪ್ರಾಥಮಿಕ, ಮಾಧ್ಯಮಿಕ, ಪ್ರೌಢಶಾಲಾ ಕನ್ನಡ ಪಠ್ಯಗಳನ್ನು ಪ್ರಥಮ, ದ್ವಿತೀಯ, ತೃತೀಯ ಭಾಷೆ ಪಾಠಗಳಲ್ಲಿರುವ ಅಕ್ಷರದೋಷ ವಾಕ್ಯ ರಚನೆಗಳ ಸ್ವರೂಪವನ್ನೂ ಅವುಗಳಿಗೆ ಸಂಬಂಧಿಸಿದ ತಿದ್ದುಪಡಿ ಮತ್ತು ತಿದ್ದುಪಡಿಯನ್ನು ಕಾರಣ ಸಹಿತ ವಿವರಸಲಾಗಿದೆ. ಅಭ್ಯಾಸ ಭಾಗದಲ್ಲಿ ಪ್ರಶ್ನೆಗಳು, ಮಾದರಿ ಅಭ್ಯಾಸ ಪಠ್ಯಗಳಲ್ಲಿ ಕಂಡು ಬಂದ ದೋಷವಿವರಗಳನ್ನು ಕಾರಣ ಸಹಿತ ವಿವರಣೆ ನೀಡಿ ಪರಿಷ್ಕರಿಸಲಾಗಿದೆ. ಉದಾ: ಒಂಬತ್ತನೆಯ ತರಗತಿ ಪಠ್ಯದಲ್ಲಿ ಎಂಬತ್ತು ಇಕ್ಕೆಲ ಇವುಗಳನ್ನು ಬಿಡಿಸಿ ಓದಲು ಸೂಚಿಸಲಾಗಿತ್ತು. ಇವುಗಳನ್ನು ಬಿಡಿಸಿ ಓದುವ ಅಗತ್ಯವಿಲ್ಲ. ಹಾಗೆಯೇ ಅದೇ ಪಾಠದ ಅಭ್ಯಾಸದ ಭಾಗದಲ್ಲಿ ಭೀಮನು ಬಂಡಿಯನ್ನು ಹರಿಸುದುದು ಎಲ್ಲಿಗೆ ಎಂದು ಪ್ರಶ್ನಿಸಲಾಗಿದೆ. ಇಂತಹ ರೂಪಗಳನ್ನು ತಿದ್ದುಪಡಿ ಮಾಡಿ ಸೂಕ್ತ ರೂಪಗಳನ್ನು ಸೂಚಿಸಲಾಗಿದೆ.

**೧೨. ಪ್ರಗತಿಯಲ್ಲಿರುವ ಯೋಜನೆಗಳು**

**೧. ಕನ್ನಡದ ಸಾಮಾಜಿಕ ಚಹರೆಗಳು (ವೈಯಕ್ತಿಕ)**

ಕನ್ನಡದ ಭಾಷಾ ಬಳಕೆಯಲ್ಲಿ ಸಾಮಾಜಿಕ ಕಾರಣಗಳಿಗಾಗಿ ಕಂಡು ಬರುವ ವ್ಯತ್ಯಾಸಗಳನ್ನು ಗುರುತಿಸುವುದು ಹಾಗೂ ಸಾಮಾಜಿಕ ವಾಸ್ತವವಾದ ಭಿನ್ನತೆ, ತಾರತಮ್ಯಗಳ ಪ್ರತಿಫಲವಾಗಿ ಭಾಷೆಯ ನುಡಿಗಟ್ಟು, ಪದಕೋಶ ಅರ್ಥಚ್ಛಾಯೆಗಳಲ್ಲಿ ಕಾಣಿಸಿಕೊಳ್ಳುವ ಸಾಮಾಜಿಕ ಚಹರೆಗಳನ್ನು ಅರಿಯುವ ಅಗತ್ಯವಿದೆ. ವ್ಯಕ್ತಿ ನಾಮಗಳಿಂದ ಹಿಡಿದು ಸಂಬೋಧನೆ, ಉಲ್ಲೇಖರೂಪಗಳು ಕ್ರಿಯಾಪದಗಳ ಬಳಕೆಯವರೆಗೂ ವ್ಯಕ್ತಿಯ ಭಾಷಿಕ ವರ್ತನೆಗಳ ಮೇಲೆ ಪ್ರಭಾವ ಬೀರುವ ಅಂಶಗಳನ್ನು ಕ್ರೋಡೀಕರಿಸುವ, ವಿಶ್ಲೇಷಿಸುವ ಪ್ರಯತ್ನ ಈ ಯೋಜನೆಯದಾಗಿದೆ.

**೨. ಕನ್ನಡ ಉಪಭಾಷಾ ಪದಕೋಶ**

ಕನ್ನಡ ಭಾಷೆಯ ಪ್ರಾದೇಶಿಕ ವ್ಯತ್ಯಾಸಗಳನ್ನು ಸಮಗ್ರವಾಗಿ ಗುರುತಿಸಿರುವುದು ಕಡಿಮೆ. ಕರ್ನಾಟಕ ವಿಶ್ವವಿದ್ಯಾಲಯ ಕರ್ನಾಟಕ ಭಾರತಿ ಸಂಚಿಕೆಯು ಜಿಲ್ಲಾವಾರು ಉಪಭಾಷಾ ರೂಪಗಳನ್ನು ಸಂಗ್ರಹಿಸಿರುವುದು ಹಾಗೂ ವೈಯಕ್ತಿಕ ನೆಲೆಯಲ್ಲಿ ಪ್ರಾದೇಶಿಕ ಕನ್ನಡಗಳ ಮೇಲೆ ಅಧ್ಯಯನಗಳು ನಡೆದಿದ್ದರೂ ಕನ್ನಡದ ಪ್ರಾದೇಶಿಕ ವ್ಯತ್ಯಾಸಗಳನ್ನು ಒಂದೇ ಕಡೆ ದಾಖಲಿಸಿಲ್ಲ. ಇಲ್ಲಿ ಪ್ರಮಾಣಿತ ರೂಪಗಳಿಗೆ ಪರ್ಯಾಯವಾಗಿ ಬಳಕೆಯಲ್ಲಿರುವ ಪ್ರಾದೇಶಿಕ ಪ್ರಭೇದರೂಪಗಳನ್ನು ಪದಕೋಶಕ್ಕೆ ಸಂಬಂಧಿಸಿ ಸಂಕಲಿಸುವುದು ಈ ಯೋಜನೆಯ ಉದ್ದೇಶ. ಈಗ ಕರ್ನಾಟಕವನ್ನು ನಲವತ್ತು ಕಿಲೋಮೀಟರ್‌ಗಳಿಗೆ ಒಂದು ಘಟಕವಾಗಿ ವಿಭಾಗಿಸಿ ಒಂದು ಊರನ್ನು ಆಯ್ದು ಮಾದರಿ ಪ್ರಮಾಣಿತ ರೂಪಗಳ ಪಟ್ಟಿಗೆ ಪರ್ಯಾಯ ರೂಪಗಳನ್ನು ಸಂಗ್ರಹಿಸಲಾಗುತ್ತಿದೆ. ಮೊದಲ ಹಂತದ ಮಾದರಿ ಸರ್ವೇಕ್ಷಣೆ ಕಾರ್ಯ ನಡೆಯುತ್ತಿದೆ.

**೧೩. ಪ್ರಕಟಣೆಗಳು**

**೧೩.೧. ವಿಶ್ವವಿದ್ಯಾಲಯದಿಂದ ಪ್ರಕಟಿತ ಕೃತಿಗಳು**

**೧. ಕೃಷಿ ಪದಕೋಶ**

ಈ ಪದಕೋಶದಲ್ಲಿ ಕೃಷಿಗೆ ಸಂಬಂಧಿಸಿದಂತೆ ಕರ್ನಾಟಕದ ಎಲ್ಲಾ ಭಾಗಗಳಿಂದಲೂ ಪದಗಳನ್ನು ಸಂಗ್ರಹಿಸಲಾಗಿದೆ. ಸಂಗ್ರಹಿತ ಪದಗಳನ್ನು ಬೇರೆ ಬೇರೆ ಅರ್ಥವಲಯಗಳಲ್ಲಿ ವಿಭಾಗ ಮಾಡಿ ಸಂಕಲಿಸಲಾಗಿದೆ. ಕನ್ನಡ ಪದಕೋಶ ನಿರ್ದಿಷ್ಟ ವಲಯವೊಂದನ್ನು ಕೇಂದ್ರೀಕರಿಸಿ ರೂಪಿಸಿರುವ ಈ ಕೋಶದಲ್ಲಿ ಸಾಧ್ಯವಾದಷ್ಟು ಪ್ರಾದೇಶಿಕ ವ್ಯತ್ಯಾಸಗಳನ್ನು ಒಂದೇ ಅರ್ಥದಲ್ಲಿ ಬಳಕೆಯಲ್ಲಿರುವ ಬೇರೆ ಬೇರೆ ಪದಕೋಶಗಳನ್ನು ಸಾಧಿತರೂಪಗಳನ್ನು ದಾಖಲಿಸಲಾಗಿದೆ.

ಉದಾ. ೧ ಹುಚ್ಚೆಳ್ಳು, ಗುರೆಳ್ಳು, ಕುರೇಸಾಣಿ



PDF created with pdfFactory trial version www.pdffactory.com

೨. ನೆಲ್ಲು, ಬತ್ತ

೩. ಗಾಡಿ, ಚಕ್ಕಡಿ, ಬಂಡಿ ಈ ಬಗೆಯ ರೂಪ ವ್ಯತ್ಯಾಗಳನ್ನೂ

ಕುಂಟೆ, ಕುಂಟಿ, ಗುಂಟ್ವೆ. ಗುಂಟೆ ಮಾದರಿಯ ಧ್ವನಿ ವ್ಯತ್ಯಾಸಗಳನ್ನೂ ದಾಖಲಿಸಿದೆ.

ಉಪಕರಣ, ಭೂಮಿ, ನೀರಾವರಿ, ಗೊಬ್ಬರ, ಬೆಳೆಗಳು, ಮಳೆ ಮತ್ತು ಹವಾಮಾನ, ಕಳೆಗಳು, ರೋಗಳು, ನಂಬಿಕೆ, ದೈವ, ಆಚರಣೆಗಳು, ಆರ್ಥಿಕ ನೆಲೆಗಳು, ಆಡಳಿತ, ಮಾರುಕಟ್ಟೆ, ಅಳತೆಮಾಪನ, ಕ್ರಿಯಾಪದಗಳನ್ನೂ ಪ್ರಧಾನ ವಲಯವನ್ನಾಗಿ ವಿಂಗಡಿಸಿ ಕೃಷಿಪದಕೋಶವನ್ನು ರೂಪಿಸಲಾಗಿದೆ.

**೨. ಭಾಷೆ ವಿಶ್ವಕೋಶ**

ಇದು ಕನ್ನಡದಲ್ಲಿ ಪ್ರಕಟವಾಗಿರುವ ಭಾಷೆಗೆ ಸಂಬಂಧಿಸಿದ ಮೊದಲ ವಿಷಯ ವಿಶ್ವಕೋಶ. ಡೇವಿಡ್ ಕ್ರಿಸ್ಟಲ್ ಅವರ ದಿ ಕೇಂಬ್ರಿಡ್ಜ್ ಎನ್‌ಸೈಕ್ಲೋಪೀಡಿಯಾ ಆಫ್‌ಲಾಂಗ್ವೇಜ್ (೧೯೮೩) ಕೃತಿಯನ್ನು ಮಾದರಿಯಾಗಿರಿಸಿಕೊಂಡು ರೂಪಿಸಲಾಗಿದೆ. ಆದರೂ ಕನ್ನಡ ಹಾಗೂ ಭಾರತೀಯ ಸಂದರ್ಭಕ್ಕೆ ವಿವರ ಹಾಗೂ ಉದಾಹರಣೆಗಳನ್ನು ಬಳಸಿಕೊಳ್ಳಲು ಸಾಧ್ಯವಿರುವೆಡೆ ಬಳಸಲಾಗಿದೆ. ಈ ವಿಶ್ವಕೋಶವು ಸಾಮಾನ್ಯ ಓದುಗರಿಗಾಗಿ ಹಾಗೂ ತಜ್ಞ ವಿಷಯ ಮಂಡನೆಯೂ ವಿಷಯ ತಜ್ಞರಿಗಾಗಿ ಇರದೆ ವಿಷಯ ಪ್ರವೇಶವನ್ನು ಬಯಸುವವರಿಗಾಗಿ ಅನುವಾಗುವಂತೆ ತಾತ್ವಿಕ ವಿಚಾರಗಳನ್ನು ಸರಳವಾಗಿ ನಿರೂಪಿಸಲಾಗಿದೆ. ನಮ್ಮ ತಿಳಿವಿನಲ್ಲಿ ಭಾಷೆ, ಭಾಷೆಯೆಂಬ ಕನ್ನಡಿ, ಭಾಷೆಯ ರಚನೆ, ಮಾತನಾಡುವುದು, ಮತ್ತು ಕೇಳಿಸಿಕೊಳ್ಳುವುದು, ಓದು ಬರಹ, ಸಂಕೇತ ಭಾಷೆ, ಭಾಷೆಯ ಕಲಿಕೆ, ಭಾಷೆ ಮೆದುಳು ವಿಕಲತೆ, ಲೋಕದ ಭಾಷೆಗಳು ಎಂಬ ಹತ್ತು ಪ್ರಧಾನ ಭಾಗಗಳಲ್ಲಿ ಅರವತ್ತೆಂಟು ಲೇಖನಗಳನ್ನು ಒಳಗೊಂಡಿದೆ.

**೩ ತ.ರಾ.ಸು**

ಚಿತ್ರದುರ್ಗಕ್ಕೆ ಸಂಬಂಧಿಸಿದ ಐತಿಹಾಸಿಕ ಕಾದಂಬರಿಗಳ ಕರ್ತೃ ಹಾಗೂ ಕನ್ನಡದ ಪ್ರಗತಿಶೀಲ ಸಾಹಿತ್ಯದ ಪ್ರಮುಖ ಲೇಖಕರಲ್ಲಿ ಒಬ್ಬರಾದ ತ.ರಾ.ಸು ಎಂದು ಖ್ಯಾತರಾದ ತಳುಕಿನ ರಾಮಸ್ವಾಮಯ್ಯ ಸುಬ್ಬರಾವ್ ಇವರ ಬದುಬರಹಗಳ ಸ್ಥೂಲ ಪರಿಚಯದ ಕೃತಿ. ತ.ರಾ.ಸು ರವರ ಕಾದಂಬರಿ, ನಾಟಕ. ಸಣ್ಣಕತೆಗಳ ಕಿರುಪರಿಚಯ ಹಾಗೂ ಇವರ ಸಾಹಿತ್ಯ ಕೃತಿಗಳ ಕುರಿತು ವಿವಿಧ ಲೇಖಕರ ಹಾಗೂ ವಿಮರ್ಶಕರ ಅಭಿಪ್ರಾಯಗಳನ್ನು ಕ್ರೋಡೀಕರಿಸಲಾಗಿದೆ. ತ.ರಾ.ಸು ರವರ ಸಮಗ್ರ ಸಾಹಿತ್ಯ ಕೃತಿಗಳ ಪಟ್ಟಿಯನ್ನು ಒದಗಿಸಲಾಗಿದೆ.

**೪. ಪಾಂಚಾಳ ವೃತ್ತಿ ಪದಕೋಶ**

ಕರ್ನಾಟಕದ ಪ್ರಮುಖ ಆಯಗಾರ ಸಮುದಾಯವಾದ ಪಾಂಚಾಳರ ವೃತ್ತಿಪದಕೋಶ, ಅಕ್ಕಸಾಲಿಗರು, ಬಡಿಗರು, ಕಮ್ಮಾರರು, ಶಿಲ್ಪಿಗಳು, ಮತ್ತು ಕಂಚುಗಾರರ ವೃತ್ತಿ ವಲಯದಲ್ಲಿ ಬಳಸುವ ಕನ್ನಡ ಪದಗಳ ಸಂಗ್ರಹ, ಉಪಕರಣಗಳು, ನಿರ್ಮಾಣಗಳು, ದೈವನಂಬಿಕೆ, ರೋಗನಿಷೇಧಗಳು, ಸಂಕೀರ್ಣ ಎಂಬ ಐದು ಪ್ರತ್ಯೇಕ ವಿಭಾಗಗಳಲ್ಲಿ ಪದಗಳನ್ನು ಅರ್ಥ ಸಹಿತವಾಗಿ ದಾಖಲಿಸಲಾಗಿದೆ. ವೃತ್ತಿ ಪದಗಳು ಒಂದು ಭಾಷೆಯ ಪದಕೋಶದ ಭಾಗವೇ ಆದರೂ ಅದು ಇಡೀ ಭಾಷಿಕರಲ್ಲಿ ಬಳಕೆಯಲ್ಲಿರುವುದಿಲ್ಲ, ವೃತ್ತಿ ವಲಯದಲ್ಲಿ ವಿಸ್ತೃತವಾದ ಬಳಕೆಯ ರೂಪಗಳು ಸಾದಿತ ರೂಪಗಳೂ ಬಳಕೆಯಲ್ಲಿರುತ್ತವೆ. ಇಂತಹ ಎಲ್ಲಾ ಪದರೂಪಗಳನ್ನು ಈ ಕೃತಿಯಲ್ಲಿ ಸಂಕಲಿಸಲಾಗಿದೆ.

**೧೩.೨. ವೈಯಕ್ತಿಕ ಪ್ರಕಟಿತ ಕೃತಿಗಳು**

**ನಮ್ಮಾತು**

ಕನ್ನಡ ಭಾಷೆಯ ರಚನೆ, ವಿವಿಧ ವಲಯಗಳಲ್ಲಿ ಬಳಕೆಯಲ್ಲಿರುವ ಕನ್ನಡ ಭಾಷೆಯ ಸಮಾಜೋಸಾಂಸ್ಕೃತಿಕ ಅಂಶಗಳ ಹಿನ್ನೆಲೆಯಲ್ಲಿ ರಚಿತವಾಗಿರುವ ಹತ್ತು ಸಂಪ್ರಬಂಧಗಳ ಸಂಕಲನ ಕನ್ನಡ ಚಲನ ಚಿತ್ರಗಳ ಭಾಷೆಯಲ್ಲಿ ಸಾಮಾಜಿಕ ಚಹರೆಗಳು, ಭಾಷಾಶಿಕ್ಷಣದ ಸಾಮಾಜಿಕ ಆಯಾಮಗಳು ಭಾಷೆಯಲ್ಲಿ ನಿಶೇಧ ಮತ್ತು ನಿರ್ಬಂಧ, ಕನ್ನಡ ಭಾಷೆ ಬದಲಾವಣೆ ಪ್ರಕ್ರಿಯೆಗಳು–ದೇಶ್ಯ ಪದಕೋಶ ಮುಂತಾದ ಲೇಖನಗಳಿವೆ.

**ನುಡಿನೋಟ**

ಕನ್ನಡ ಭಾಷೆಯ ರಚನೆ, ಬದಲಾವಣೆಯ ಹಿನ್ನೆಲೆಯಲ್ಲಿ ಪ್ರವೃತ್ತವಾಗಿರುವ ಸಮಾಜೋಸಾಂಸ್ಕೃತಿಕ ಆಯಾಮಗಳನ್ನು ಗಮನದಲ್ಲಿರಿಸಿಕೊಂಡು ಬರೆಯಲಾಗಿರುವ ಹದಿಮೂರು ಲೇಖನಗಳ ಸಂಗ್ರಹ ಹೇಮೀಲೇ ಅಂದರೆ....., ಬಯ್ಗಳ ಸಾಮಾಜಿಕ ಸಾಂಸ್ಕೃತಿಕ ವಿನ್ಯಾಸ, ಕನ್ನಡದೊಳಗಣ ಇಂಗ್ಲಿಶ್, ಜೋಡು



PDF created with pdfFactory trial version www.pdffactory.com

ನುಡಿಗಳಿಗೆ ಹೀಗೊಂದು ವಿವರಣೆ, ಮಂತ್ರ ವಿದ್ಯೆ ಮತ್ತು ಭಾಷೆ, ಅಲೆಮಾರಿಗಳು ಮತ್ತು ಭಾಷೆ, ಭಾಷಾ ತಂತ್ರಜ್ಞಾನ ಮತ್ತು ಸಮಾಜ, ಕನ್ನಡದಿಂದ ಕನ್ನಡವೇ ಹೊರಗೆ ಮುಂತಾದ ಲೇಖನಗಳಿವೆ.

**೧೩.೩. ಸಂಪಾದಿತ ಕೃತಿಗಳು**

**೧. ಕೃಷಿ ಪದಕೋಶ**

ಈ ಪದಕೋಶದಲ್ಲಿ ಕೃಷಿಗೆ ಸಂಬಂಧಿಸಿದಂತೆ ಕರ್ನಾಟಕದ ಎಲ್ಲಾ ಭಾಗಗಳಿಂದಲೂ ಪದಗಳನ್ನು ಸಂಗ್ರಹಿಸಲಾಗಿದೆ. ಸಂಗ್ರಹಿತ ಪದಗಳನ್ನು ಬೇರೆ ಬೇರೆ ಅರ್ಥವಲಯಗಳಲ್ಲಿ ವಿಭಾಗ ಮಾಡಿ ಸಂಕಲಿಸಲಾಗಿದೆ. ಕನ್ನಡ ಪದಕೋಶ ನಿರ್ದಿಷ್ಟ ವಲಯವೊಂದನ್ನು ಕೇಂದ್ರೀಕರಿಸಿ ರೂಪಿಸಿರುವ ಈ ಕೋಶದಲ್ಲಿ ಸಾಧ್ಯವಾದಷ್ಟು ಪ್ರಾದೇಶಿಕ ವ್ಯತ್ಯಾಸಗಳನ್ನು ಒಂದೇ ಅರ್ಥದಲ್ಲಿ ಬಳಕೆಯಲ್ಲಿರುವ ಬೇರೆ ಬೇರೆ ಪದಕೋಶಗಳನ್ನು ಸಾಧಿತರೂಪಗಳನ್ನು ದಾಖಲಿಸಲಾಗಿದೆ.

ಉದಾ. ೧ ಹುಚ್ಚೆಳ್ಳು, ಗುರೆಳ್ಳು, ಕುರೇಸಾಣಿ

೨. ನೆಲ್ಲು, ಬತ್ತ

೩. ಗಾಡಿ, ಚಕ್ಕಡಿ, ಬಂಡಿ ಈ ಬಗೆಯ ರೂಪ ವ್ಯತ್ಯಾಗಳನ್ನೂ

ಕುಂಟೆ, ಕುಂಟಿ, ಗುಂಟ್ವೆ. ಗುಂಟೆ ಮಾದರಿಯ ಧ್ವನಿ ವ್ಯತ್ಯಾಸಗಳನೂ ದಾಖಲಿಸಿದೆ.

ಉಪಕರಣ, ಭೂಮಿ, ನೀರಾವರಿ, ಗೊಬ್ಬರ, ಬೆಳೆಗಳು, ಮಳೆ ಮತ್ತು ಹವಾಮಾನ, ಕಳೆಗಳು, ರೋಗಳು, ನಂಬಿಕೆ, ದೈವ, ಆಚರಣೆಗಳು, ಆರ್ಥಿಕ ನೆಲೆಗಳು, ಆಡಳಿತ, ಮಾರುಕಟ್ಟೆ, ಅಳತೆಮಾಪನ, ಕ್ರಿಯಾಪದಗಳನ್ನೂ ಪ್ರಧಾನ ವಲಯವನ್ನಾಗಿ ವಿಂಗಡಿಸಿ ಕೃಷಿಪದಕೋಶವನ್ನು ರೂಪಿಸಲಾಗಿದೆ.

**೨. ಭಾಷೆ ವಿಶ್ವಕೋಶ**

ಇದು ಕನ್ನಡದಲ್ಲಿ ಪ್ರಕಟವಾಗಿರುವ ಭಾಷೆಗೆ ಸಂಬಂಧಿಸಿದ ಮೊದಲ ವಿಷಯ ವಿಶ್ವಕೋಶ. ಡೇವಿಡ್ ಕ್ರಿಸ್ಟಲ್ ಅವರ ದಿ ಕೇಂಬ್ರಿಡ್ಜ್ ಎನ್‌ಸೈಕ್ಲೋಪೀಡಿಯಾ ಆಫ್‌ಲಾಂಗ್ವೇಜ್ (೧೯೮೩) ಕೃತಿಯನ್ನು ಮಾದರಿಯಾಗಿರಿಸಿಕೊಂಡು ರೂಪಿಸಲಾಗಿದೆ. ಆದರೂ ಕನ್ನಡ ಹಾಗೂ ಭಾರತೀಯ ಸಂದರ್ಭಕ್ಕೆ ವಿವರ ಹಾಗೂ ಉದಾಹರಣೆಗಳನ್ನು ಬಳಸಿಕೊಳ್ಳಲು ಸಾಧ್ಯವಿರುವೆಡೆ ಬಳಸಲಾಗಿದೆ. ಈ ವಿಶ್ವಕೋಶವು ಸಾಮಾನ್ಯ ಓದುಗರಿಗಾಗಿ ಹಾಗೂ ತಜ್ಞ ವಿಷಯ ಮಂಡನೆಯೂ ವಿಷಯ ತಜ್ಞರಿಗಾಗಿ ಇರದೆ ವಿಷಯ ಪ್ರವೇಶವನ್ನು ಬಯಸುವವರಿಗಾಗಿ ಅನುವಾಗುವಂತೆ ತಾತ್ವಿಕ ವಿಚಾರಗಳನ್ನು ಸರಳವಾಗಿ ನಿರೂಪಿಸಲಾಗಿದೆ. ನಮ್ಮ ತಿಳಿವಿನಲ್ಲಿ ಭಾಷೆ, ಭಾಷೆಯೆಂಬ ಕನ್ನಡಿ, ಭಾಷೆಯ ರಚನೆ, ಮಾತನಾಡುವುದು, ಮತ್ತು ಕೇಳಿಸಿಕೊಳ್ಳುವುದು, ಓದು ಬರಹ, ಸಂಕೇತ ಭಾಷೆ, ಭಾಷೆಯ ಕಲಿಕೆ, ಭಾಷೆ ಮೆದುಳು ವಿಕಲತೆ, ಲೋಕದ ಭಾಷೆಗಳು ಎಂಬ ಹತ್ತು ಪ್ರಧಾನ ಭಾಗಗಳಲ್ಲಿ ಅರವತ್ತೆಂಟು ಲೇಖನಗಳನ್ನು ಒಳಗೊಂಡಿದೆ.

**೧೪. ಪ್ರಕಟಿತ ಪ್ರಮುಖ ೧೦ ಲೇಖನಗಳು**

**೧. ಭಾಷೆಯ ಸಾಮಾಜಿಕ ಚಹರೆಗಳು**

ಭಾಷೆಯ ಸಾಮಾಜಿಕ ಚಹರೆಗಳನ್ನು ಸಮಾಜಿಕ ಭಾಷಾಶಾಸ್ತ್ರದ ನಲೆಯಲ್ಲಿ ಬರೆದಿರುವ ಲೇಖನ. ಭಾರತೀಯ ಹಾಗೂ ಕನ್ನಡ ಪರಿಸರದ ಉದಾಹರಣೆಗಳನ್ನು ಸಾಧ್ಯವಾದಷ್ಟೂ ಬಳಸಲಾಗಿದೆ. ಭಾಷೆಯ ಸಾಮಾಜಿಕ ಚಹರೆಗಳನ್ನು ವಿವರಿಸಲು ಮತ್ತು ಅರ್ಥೈಸಲು ಸಮಜೋಭಾಷಿಕವಾದ ವಿವಿಧ ನೆಲೆಗಳನ್ನು ಪರಿಶೀಲಿಸಲಾಗಿದೆ. ಭಾಷೆಯಲ್ಲಿ ಕಾಣುವ ಸಾಮಾಜಿಕ ಚಹರೆಗಳನ್ನು ನಿಯಂತ್ರಕಗಳಾದ ಶ್ರೇಣೀಕರಣ. ಸಾಮಾಜಿಕ ಅಂತಸ್ತು, ಸಾಮಾಜಿಕ ಅನನ್ಯತೆ, ಲಿಂಗಭಿನ್ನತೆಯ ಅಂಶಗಳನ್ನು ಆಧರಿಸಿ ವಿವರಿಸಲಾಗಿದೆ.

**೨ ವ್ಯಕ್ತಿನಾಮಗಳು : ಸಾಮಾಜಿಕ ನೆಲೆ**

ವ್ಯಕ್ತಿನಾಮಗಳು ವ್ಯಕ್ತಿಗೆ ಐಚ್ಛಿಕವಾದರೂ ಅವುಗಳು ಆಚರಣೆ, ನಂಬಿಕೆ ಹಾಗೂ ಸಾಮಾಜಿಕ ನೆಲೆಗಳಿಂದ ನಿಯಂತ್ರಿತವಾಗಿರುತ್ತವೆ. ವ್ಯಕ್ತಿನಾಮಗಳ ಬಳಕೆ ಅಂದರೆ ಹೆಸರಿಸುವುದು, ಸಂಬೋಧಿಸುವುದು, ಉಲ್ಲೇಖಿಸುವುದು ಪ್ರತಿಯೊಂದೂ ಸಮಾಜ ಸಂಬಂಧಿಯಾಗಿ ನಿಯಂತ್ರಿತವಾಗಿರುತ್ತವೆ. ಅಂದರೆ ವ್ಯಕ್ತಿಯ ಸಾಮಾಜಿಕ ಶ್ರೇಣಿ, ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಸ್ಥಾನಮಾನ, ಜಾತಿ, ಧರ್ಮ, ವೃತ್ತಿ ಮುಂತಾದ ಅಂಶಗಳು ವೃತ್ತಿನಾಮಗಳ ವಿವಿಧ ನೆಲೆಯ ಬಳಕೆಗಳ ಮೇಲೆ ಹೇಗೆ ಪ್ರಭಾವಿಸಿವೆ ಎಂಬುದರ ವಿವರಣೆಯಿದೆ.

**೩. ಸ್ಥಳನಾಮಗಳು ಆಂಗ್ಲ ಆಡಳಿತ ಇಂಗ್ಲಿಶ್ ಪ್ರಭಾವಗಳು**

ಭಾಷೆಯ ಇತರ ಘಟಕಗಳಂತೆಯೇ ಸ್ಥಳನಾಮಗಳೂ ಅನ್ಯ ಭಾಷೆ ಅನ್ಯ ಆಡಳಿತ ಅನ್ಯ ಸಂಸ್ಕೃತಿಗಳಿಂದ ಪ್ರಭಾವಿತವಾಗಿರುತ್ತವೆ. ಈ ಪ್ರಭಾವಗಳಿಂದ ಪ್ರೇರಣೆಗೊಂಡು ಬದಲಾಗುವುದೂ ಇದೆ. ಹೀಗೆ ಇಂಗ್ಲಿಶ್‌ಭಾಷೆ



PDF created with pdfFactory trial version www.pdffactory.com

ಮತ್ತು ಆಂಗ್ಲರ ಆಡಳಿತದಿಂದ ಪ್ರೇರಣೆ ಅಥವಾ ಪ್ರಭಾವಗೊಂಡಿರುವ ಕರ್ನಾಟಕದ ಸ್ಥಳನಾಮಗಳನ್ನು ಈ ಲೇಖನದಲ್ಲಿ ಚರ್ಚಿಸಲಾಗಿದೆ ವಾರ್ಗಿಕ, ನಿರ್ದಿಷ್ಟಗಳ ಮೇಲಿನ ಪ್ರಭಾವ, ಬರಹ–ಬಳಕೆಯ ಮೇಲಿನ ಪ್ರಭಾವ ಇಂಗ್ಲಿಶ್‌ನಿಂದ ಕನ್ನಡಕ್ಕೆ ಮರುನಾಮಕರಣ, ಇಂಗ್ಲಿಶ್ ಮಾದರಿಗಳ ಮುಂದುವರಿಕೆ ಮುಂತಾದ ಅಂಶಗಳನ್ನು ಚರ್ಚಿಸಲಾಗಿದೆ.

**೪. ನಮ್ಮಾಟ ನಮ್ಮನು**

ಆಟಗಳಲ್ಲಿ ಭಾಷೆ ಹಲವು ಬಗೆಯಲ್ಲಿ ಬಳಕೆಯಾಗುತ್ತದೆ. ಸಾಮಾನ್ಯ ಬಳಕೆಯ ವಲಯದ ಪದಗಳು ಆಟದ ವಲಯದಲ್ಲಿ ಭಿನ್ನಾರ್ಥದಲ್ಲಿ ಬಳಕೆಯಾಗಬಹುದು ಹಾಗೆಯೇ ವ್ಯವಹಾರದ ನೆಲೆಯಿಂದ ಆಟದ ನೆಲೆಗೆ ಬಂದಾಗ ಅರ್ಥಾಂತರ, ಅರ್ಥಸಂಕೋಚ, ಅರ್ಥವಿಸ್ತಾರದಂತಹ ಪ್ರಕ್ರಿಯೆಗಳೂ ನಡೆಯುತ್ತವೆ. ಸಾಮಾಜಿಕ ಬದಲಾವಣೆ ಬೆಳವಣಿಗೆಯಾದಂತೆ ಪದಕೋಶದಿಂದ ಕಳಚಿಹೋದ ಪದಗಳು ಆಟದಂತಹ ನಿರ್ದಿಷ್ಟ ವಲಯಗಳಲ್ಲಿ ಇನೂ ಬಳಕೆಯಲ್ಲಿ ಉಳಿದಿರುತ್ತವೆ. ಇಂತಹ ವಿವರಗಳನ್ನು ಪ್ರಸ್ತುತ ಲೇಖವು ಒಳಗೊಂಡಿದೆ. ಆಟದೊಳಗೆ ಬಳಕೆಯಾಗುವ ಅನ್ಯದೇಸೀ ಪದರೂಪಗಳನ್ನೂ ಗಮನಿಸಲಾಗಿದೆ.

**೫ ಸಾಮಾಜಿಕ ಸಂವಹನ ಲಿಂಗ ತಾರತಮ್ಯ ಭಿನ್ನತೆ**

ಸಾಮಾಜಿಕವಾಗಿ ರೂಪುಗೊಂಡಿರುವ ಲಿಂಗತಾರತಮ್ಯವು ಸಂವಹನದ ವಿವಿಧ ಆಕರಗಳಲ್ಲಿ ವ್ಯಕ್ತವಾಗುತ್ತದೆ. ತಾರತಮ್ಯಕ್ಕೆ ಸಮಾಜೋಸಾಂಸ್ಕೃತಿಕವಾದ ರಾಜಕೀಯಾರ್ಥಿಕವಾದ ಬೇರೆಬೇರೆ ಕಾರಣಗಳಿದ್ದರೂ ಈ ಕಾರಣಗಳಿಂದ ರೂಪುಗೊಂಡಿರುವ ತಾರತಮ್ಯವನ್ನು ಪೋಷಿಸುವಲ್ಲಿ ಮತ್ತು ನಿರ್ವಹಿಸುವಲ್ಲಿ ಸಂವಹನ ಆಕರಗಳು ಪ್ರಮುಖ ಪಾತ್ರ ವಹಿಸುತ್ತವೆ. ಸಂವಹನ ಆಕರವಾಗಿ ಭಾಷೆಯನ್ನು ಬಳಸುವಾಗ ವ್ಯಕ್ತಿನಾಮಗಳಿಂದ ಹಿಡಿದು ಸಂಬಂಧವಾಚಕ, ಸಂಬೋಧನಾರೂಪಗಳವರೆಗೆ ನಿರ್ವಹಿಸಲ್ಪಡುವ ಮಾದರಿಗಳನ್ನು ಈ ಲೇಖನದಲ್ಲಿ ವಿಶ್ಲೇಷಿಸಲಾಗಿದೆ.

**೬ ಣೇ. ಮೀ. ಲೇ ಅಂದರೆ...**

ಭಾರತದ ಸಾಮಾಜಿಕ ಪರಂಪರೆಯ ಭಿನ್ನತೆಯ ಮಾದರಿಗಳು ಭಾಷಿಕವಾಗಿ ವ್ಯಕ್ತವಾಗುವ ಬಗೆಯನ್ನು ಕರ್ನಾಟಕದ ಒಂದು ಗ್ರಾಮದಲ್ಲಿ ವಾಸಿಸುವ ವಿವಿಧ ಜಾತಿ, ಧರ್ಮಗಳಿಗೆ ಸೇರಿದ ಕನ್ನಡ ಮಾತನಾಡುವ ಜನರಲ್ಲಿ ಸಾಮಾಜಿಕರೆಡೆಗಿನ ಮನೋಭಾವಗಳನ್ನು, ವಿವಿಧ ಜಾತಿ ಜನರ ಅನನ್ಯತೆಯ ಚಹರೆಗಳನ್ನು, ಪರಸ್ಪರ ಅಂತರ–ಸಾಮೀಪ್ಯಗಳನ್ನು ಅವರು ಬಳಸುತ್ತಿರುವ ಕನ್ನಡದಲ್ಲಿ ಕಂಡು ಬರುವ ಸಂಬೋಧನಾ ರೂಪಗಳನ್ನು ಆಧರಿಸಿ ವಿಶ್ಲೇಷಿಸಲಾಗಿದೆ.

**೭. ಭಾಷಾ ಶಿಕ್ಷಣದ ಸಾಮಾಜಿಕ ಆಯಾಮಗಳು**

ಔಪಚಾರಿಕ ಶಿಕ್ಷಣದ ಭಾಗವಾದ ಮಾತೃಭಾಷಾ ಬೋಧನೆ ಕಲಿಕೆಯಲ್ಲಿ ಕಲಿಯುವ ಮಗುವಿನ ಸಾಮಾಜಿಕ ನೆಲೆಗಳನ್ನು ಯಾವ ಹಂತಗಳಲ್ಲಿಯೂ ಪರಿಗಣನೆಗೆ ತೆಗೆದುಕೊಳ್ಳಲಾಗುತ್ತಿಲ್ಲ. ಶಾಲೆಗೆ ಸೇರಿರುವ ಮಗು ತನ್ನ ಪರಿಸರದ ಭಾಷಾ ಪ್ರಬೇಧವೊಂದನ್ನು ಈಗಾಗಲೇ ಕಲಿತು ಬಂದಿರುತ್ತದೆ. ಔಪಚಾರಿಕ ಶಿಕ್ಷಣ ಕ್ರಮ ಮಗು ಈಗಾಗಲೇ ಕಲಿತಿರುವ ಸಾಮಗ್ರಿಯನ್ನು ಗಣನೆಗೆ ತೆಗೆದುಕೊಳ್ಳುವುದಿಲ್ಲ. ಶಿಕ್ಷಣದಲ್ಲಿ ಕಲಿಯುವಾಗ ಹಿಂದುಳಿಯುವಿಕೆಗೆ ಭಾಷಿಕೇತರವಾದ ಅನೇಕ ಕಾರಣಗಳನ್ನು ಮುಂದು ಮಾಡಲಾಗುತ್ತಿದೆ. ಬದಲಾಗಿ ಭಾಷಿಕ ನೆಲೆಯಲ್ಲಿಯೇ ಈ ಸಮಸ್ಯೆಗಳ ಮೂಲವಿರುವುದನ್ನು ಈ ಲೇಖನದಲ್ಲಿ ಚರ್ಚಿಸಿದೆ.

**೮. ಒಂದನೇ ತರಗತಿಯಿಂದಲೇ ಇಂಗ್ಲಿಶ್ ಯಾಕೆಂದರೆ...**

ಗ್ರಾಮೀಣ, ದಲಿತ, ಹಿಂದುಳಿದ ವರ್ಗದ ಮಕ್ಕಳಿಗೆ ಒಂದನೇ ತರಗತಿಯಿಂದಲೇ ಇಂಗ್ಲಿಶ್ ಶಿಕ್ಷಣ ನೀಡುವ ಕುರಿತು ಪರವಿರೋಧದ ಚರ್ಚೆಗಳು ನಡೆದ ಸಂದರ್ಭದಲ್ಲಿ ಭಾರತೀಯ ಶಿಕ್ಷಣ, ಆರ್ಥಿಕತೆ, ಸಾಮಾಜಿಕ ಸ್ಥಾನಮಾನಕ್ಕೂ ಮತ್ತು ಇಂಗ್ಲಿಶ್ ಕಲಿಕೆಗೂ ಇರುವ ಸಂಬಂಧಗಳನ್ನು ಆ ಮೂಲಕ ಸಾಮಾಜಿಕ ತಾರತಮ್ಯ ನಿವಾರಣೆಯ ಅಸ್ತ್ರವಾಗಿ ಇಂಗ್ಲಿಶ್ ಕಲಿಕೆಯನ್ನು ಒಂದನೇ ತರಗತಿಯಿಂದಲೇ ಕಲಿಸುವುದು ಸೂಕ್ತವೆನ್ನುವ ವಿಚಾರಗಳನ್ನು ಪ್ರಸ್ತುತ ಲೇಖನದಲ್ಲಿ ಚರ್ಚಿಸುವ ಪ್ರಯತ್ನ ಮಾಡಲಾಗಿದೆ. ಕನ್ನಡವನ್ನು ಉಳಿಸಿಕೊಂಡು ವಿದ್ಯಾರ್ಥಿ ಪ್ರವೇಶಿಸುವ ಶಿಕ್ಷಣೋತ್ತರ ಔದ್ಯೋಗಿಕ ಅವಕಾಶಗಳ, ಸಾಮಾಜಿಕ ಕ್ಷೇತ್ರಗಳ ಒತ್ತಡ, ಭಾಷಿಕ ಅಪೇಕ್ಷೆಗಳ ಹಿನ್ನೆಲೆಯಲ್ಲಿ ಇಂಗ್ಲಿಶ್ ಶಿಕ್ಷಣದ ವಿಚಾರವನ್ನು ಪರಿಶೀಲಿಸುವ ಅಗತ್ಯವಿದೆ ಎಂಬುದನ್ನು ಈ ಲೇಖನದಲ್ಲಿ ವಿವರಿಸುವ ಪ್ರಯತ್ನಿಸಲಾಗಿದೆ.

**೯. ದಲಿತರು ಭಾಷೆ ಮತ್ತು ಶಿಕ್ಷಣ**



PDF created with pdfFactory trial version www.pdffactory.com

ಪ್ರಸ್ತುತ ಸಂದರ್ಭದಲ್ಲಿ ದಲಿತರು ತಮ್ಮ ಸಾಮಾಜಿಕ ಸಾಂಸ್ಕೃತಿಕ ಅಸ್ತಿತ್ವಕ್ಕಾಗಿ ತಮ್ಮ ಭಾಷಿಕ ಚಹರೆಗಳನ್ನು ಕಳೆದುಕೊಳ್ಳುವ ಅನಿವಾರ್ಯ ಸಂದರ್ಭ ಸೃಷ್ಟಿಯಾಗಿದೆ. ದಲಿತ ಮಕ್ಕಳು ಶಾಲಾ ಶಿಕ್ಷಣದ ಮೂಲಕ ಕಲಿಯಬೇಕಾದ ಕನ್ನಡ ಮನೆಯ ಪರಿಸರದಲ್ಲಿ ಗಳಿಸಿದ ಕನ್ನಡಕ್ಕಿಂತ ಭಿನ್ನವಾಗಿರುತ್ತದೆ. ಹೀಗೆ ಕಲಿಯಬೇಕಾದ ಕನ್ನಡದ ಎದುರು ತಮ್ಮ ತಿಳಿವಿನಲ್ಲಿ ಈಗಾಗಲೇ ಇರುವ ಕನ್ನಡದ ಬಗೆಗೆ ಕೀಳರಿಮೆ ಉಂಟಾಗುವ ಹಾಗೂ ಕಲಿಯಬೇಕಾದ ಉದ್ದೇಶಿತ ಕನ್ನಡದಲ್ಲಿರುವ ಅನಗತ್ಯ ಕೃತಕ ಸಮಸ್ಯೆಗಳನ್ನು ಪ್ರಸ್ತುತ ಲೇಖನದಲ್ಲಿ ವಿಶ್ಲೇಷಿಸುವ ಪ್ರಯತ್ನ ಮಾಡಲಾಗಿದೆ.

**೧೦. ಭಾಷಾ ತಂತ್ರಜ್ಞಾನ ಮತ್ತು ಸಮಾಜ**

ಆಧುನಿಕ ತಂತ್ರಜ್ಞಾನ ಮಾನವ ಬದುಕನ್ನು ಸೌಲಭ್ಯಪೂರ್ಣವಾಗಿಸಿದಂತೆಯೇ ಮಾನವನ ಸಾಂಸ್ಕೃತಿಕ ಬದುಕಿನ ಮೇಲೆ ಕೆಟ್ಟ ಪರಿಣಾಮಗಳನ್ನೂ ಬೀರಿದೆ. ಹಾಗೆಯೇ ಭಾಷಾತಂತ್ರಜ್ಞಾನವು ತನ್ನಷ್ಟಕ್ಕೆ ತಾನೂ ವಿಶಿಷ್ಟವಾಗಿ, ವೇಗವಾಗಿ ಬೆಳೆಯುತ್ತಿದ್ದು ವಿವಿಧ ಕ್ಷೇತ್ರಗಳಲ್ಲಿ ಅದು ಇರುವಂತೆಯೇ ಬಳಸಿಕೊಳ್ಳಬೇಕಾದ ಅನಿವಾರ್ಯತೆ ಭಾಷೆಗಳಿಗೆ ಅಥವಾ ಭಾಷಿಕರಿಗೆ ಸೃಷ್ಟಿಯಾಗಿದೆ. ಅಂದರೆ ಯಾವುದೋ ಒಂದು ಭಾಷೆಯ ರಚನೆಗೆ ಹೊಂದುವಂತೆ ರೂಪಿಸಲಾದ ತಂತ್ರಜ್ಞಾನವನ್ನು ಇತರೆ ಭಾಷೆಗಳಿಗೂ ಅಳವಡಿಸಬೇಕಾದ ಅನಿವಾರ್ಯತೆಗಳನ್ನೂ ಸೃಷ್ಟಿಸಲಾಗುತ್ತಿದೆ. ಅಂದರೆ ಇದು ತಂತ್ರಜ್ಞಾನದ ಸಮಸ್ಯೆಯಲ್ಲ ತಂತ್ರಜ್ಞಾನ ನಿರ್ವಹಣೆಯ ಸಮಸ್ಯೆ. ಅಂದರೆ ಭಾಷೆಗಳಿಗಾಗಿ ತಂತ್ರಜ್ಞಾನವನ್ನು ರೂಪಿಸುತ್ತಿಲ್ಲ ತಂತ್ರಜ್ಞಾನಗಳಿಗಾಗಿ ಭಾಷೆಗಳನ್ನು ಒಗ್ಗಿಸಲಾಗುತ್ತಿದೆ ಎಂಬ ವಿಷಯವನ್ನು ಇಲ್ಲಿ ಚರ್ಚಿಸುವ ಪ್ರಯತ್ನ ಮಾಡಲಾಗಿದೆ.

**೧೫. ಪಿಎಚ್.ಡಿ ಮಾರ್ಗದರ್ಶನ**

| ಅಭ್ಯರ್ಥಿಗಳು | ಶೀರ್ಷಿಕೆ | ಪದವಿಘೋಷಿಸಿದ ದಿನಾಂಕ |
|---|---|---|
| ೧. ದೇವೇಂದ್ರಪ್ಪ ಜಾಜಿ | ಆಂಧ್ರ ಕರ್ನಾಟಕ ಗಡಿ ಪ್ರದೇಶದ ಸ್ಥಳನಾಮಗಳು | ೨೦೦೩ |
| ೨. ಸಣ್ಣ ಪಾಪಯ್ಯ | ಚಿತ್ರದುರ್ಗ ಪರಿಸರದ ವ್ಯಕ್ತಿನಾಮಗಳು | ೨೦೦೩ |
| ೩. ಪ್ರೇಮಪಲ್ಲವಿ | ಕನ್ನಡ ಚಲನಚಿತ್ರಗಳಲ್ಲಿ ಕನ್ನಡ ಭಾಷೆಯ ಬಳಕೆ | ೨೦೦೮ |

**೧. ಆಂಧ್ರ ಕರ್ನಾಟಕ ಗಡಿ ಪ್ರದೇಶದ ಸ್ಥಳನಾಮಗಳು ಜಾಜಿ ದೇವೇಂದ್ರಪ್ಪ ೨೦೦೩**

ಕನ್ನಡ ತೆಲುಗು ದ್ವಿಭಾಷಿಕ ಪ್ರದೇಶದ ಸ್ಥಳನಾಮಗಳನ್ನು ಭಾಷಿಕ ಮತ್ತು ಸಮಾಜೋಸಾಂಸ್ಕೃತಿಕ ನೆಲೆಯಲ್ಲಿ ಅಧ್ಯಯನ ಮಾಡಿರುವ ಪ್ರಬಂಧ ಒಟ್ಟು ಎಂಟು ಅಧ್ಯಾಯಗಳಿದ್ದು. ಕನ್ನಡ ಸ್ಥಳನಾಮಾಧ್ಯಯನ ಪರಂಪರೆಯ ಅವಲೋಕನ. ಸ್ಥಳನಾಮಗಳ ಸ್ವರೂಪ ವರ್ಗೀಕರಣ, ಸ್ಥಳನಾಮಗಳ ಭಾಷಿಕ ಅಧ್ಯಯನ. ಮೌಖಿಕ ಪರಂಪರೆ ಮತ್ತು ಸ್ಥಳನಾಮಗಳು ಚರಿತ್ರೆ ಮತ್ತು ಸ್ಥಳನಾಮಗಳ ಹಿನ್ನೆಲೆಯಲ್ಲಿ ಭಾಷಿಕ ಅವಸ್ಥಾಂತರದ ಕುರುಹುಗಳು. ಸ್ಥಳನಾಮಗಳ ಸಾಮಾಜಿಕ ಅಧ್ಯಯನ ಎಂಬ ಮುಖ್ಯ ಅಧ್ಯಾಯಗಳಿವೆ. ಕನ್ನಡ ತೆಲುಗು ದ್ವಿಭಾಷಿಕ ಪರಿಸರದಲ್ಲಿ ದ್ವಿನಾಮಗಳ ನಿರ್ವಹಣೆಯನ್ನು ಚರ್ಚಿಸಿದ್ದಾರೆ. ಭಾರತೀಯ ಸಾಮಾಜಿಕ, ಆರ್ಥಿಕ, ರಾಜಕೀಯ ವ್ಯವಸ್ಥೆಯ ಪ್ರತಿಫಲನಗಳು ಸ್ಥಳನಾಮಗಳಲ್ಲಿ ಕಾಣಿಸಿಕೊಳ್ಳುವ ಬಗೆಯನ್ನು ಚರ್ಚಿಸಲಾಗಿದೆ. ವಿಸ್ತೃತವಾದ ಕ್ಷೇತ್ರಮಾಹಿತಿ, ಲಿಖಿತ, ಮೌಖಿಕಆಕರ, ಶಾಸನ, ಕೈಫಿಯತ್ತು ಮುದ್ರಿಕೆಗಳನ್ನು ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದೆ.

**೨. ಚಿತ್ರದುರ್ಗ ಪರಿಸರದ ವ್ಯಕ್ತಿನಾಮಗಳು ಸಣ್ಣ ಪಾಪಯ್ಯ ಪದವಿ ಪಡೆದ ವರ್ಷ೨೦೦೩**

ಕನ್ನಡದಲ್ಲಿ ವ್ಯಕ್ತಿನಾಮಗಳನ್ನು ಭಾಷಿಕ ಅಧ್ಯಯನಕ್ಕೆ ಒಳಪಡಿಸಿರುವ ಮುಖ್ಯವಾದ ಪ್ರಬಂಧ. ಕನ್ನಡದಲ್ಲಿ ಈ ಕ್ಷೇತ್ರದಲ್ಲಿ ಅಧ್ಯಯನಗಳು ನಡೆದಿರುವುದು ಅತ್ಯಂತ ಕಡಿಮೆ. ವ್ಯಕ್ತಿನಾಮಗಳ ಸಾಮಾಜಿಕ ಅಧ್ಯಯನವು ಈ ಪ್ರಬಂಧದ ಮುಖ್ಯಭಾಗವಾಗಿದ್ದು ಭಾರತೀಯ ಪರಿಸರದಲ್ಲಿ ವೃತ್ತಿ, ಜಾತಿ, ಧರ್ಮಗಳ ನಿಯಂತ್ರಣದಲ್ಲಿ ಮತ್ತು ಸಮುದಾಯಗಳ ಆಚರಣೆ, ನಂಬಿಕೆಗಳ ಸಂಬಂಧದಲ್ಲಿಯೇ ವ್ಯಕ್ತಿನಾಮ ಘಟಕಗಳ ವಿನ್ಯಾಸಗಳು ರೂಪುಗೊಳ್ಳುವ ಪ್ರಕ್ರಿಯೆಯನ್ನು ಸ್ಪಷ್ಟವಾಗಿ ದಾಖಲಿಸಿದೆ. ರಾಜಕೀಯ ಕಾರಣಗಳಿಗಾಗಿ ನಿರ್ದಿಷ್ಟ ಸಮುದಾಯಗಳಿಗೆ ಸಂಬಂಧಿಸಿದಂತೆ ಕ್ರೋಡೀಕರಣಗೊಳ್ಳುತ್ತಿರುವ ಜಾತಿಯ ಸಂಬಂಧ ಜಾತಿಯೊಂದಿಗಿನ ಅನನ್ಯತೆಯ ಚಹರೆಗಳ ಕಡೆಗೂ ಈ ಅಧ್ಯಯನ ಗಮನಸೆಳೆದಿದೆ.

**೩. ಕನ್ನಡ ಚಲನಚಿತ್ರಗಳಲ್ಲಿ ಕನ್ನಡ ಭಾಷೆಯ ಬಳಕೆ ಪ್ರೇಮಪಲ್ಲವಿ ೨೦೦೮**

ಪ್ರಸ್ತುತ ಅಧ್ಯಯನದಲ್ಲಿ ೧೯೩೪-೨೦೦೭ರ ವರೆಗಿನ ಚಲನ ಚಿತ್ರಗಳನ್ನು ಆಕರವಾಗಿ ಬಳಸಿಕೊಳ್ಳಲಾಗಿದೆ. ಮುಖ್ಯವಾಗಿ ೧೯೬೦-೨೦೦೭ರ ವರೆಗಿನ ಹೆಚ್ಚು ಚಿತ್ರಗಳಿಂದ ಮಾಹಿತಿ ಬಳಸಲಾಗಿದೆ. ಕರ್ನಾಟಕದಲ್ಲಿ ಉಂಟಾದ ರಾಜಕೀಯ, ಸಾಹಿತ್ಯಿಕ, ಸಾಮಾಜಿಕ ಬೆಳವಣಿಗೆಯ ಹಿನ್ನೆಲೆಯಲ್ಲಿ ಕನ್ನಡ ಚಲನ ಚಿತ್ರಗಳ ಶೀರ್ಷಿಕೆಯಿಂದ ಹಿಡಿದು. ಚಲನ ಚಿತ್ರಗಳ ಒಳ ಆವರಣ ಹಾಗೂ ಪೂರಕ ಆವರಣಗಳಾದ ಪ್ರಚಾರ



PDF created with pdfFactory trial version www.pdffactory.com

ಮಾಧ್ಯಮ, ವಿಮರ್ಶೆ ಬರಹ ಮುಂತಾದ ಕ್ಷೇತ್ರಗಳಲ್ಲಿಯೂ ಭಾಷೆ ಬಳಕೆಯಾಗಿರುವ ರೀತಿಯನ್ನು ಅಧ್ಯಯನ ಮಾಡಲು ಪ್ರಯತ್ನಿಸಲಾಗಿದೆ. ಒಟ್ಟು ಆರು ಅಧ್ಯಾಯಗಳಿದ್ದು ಕನ್ನಡ ಚಲನಚಿತ್ರಗಳ ಭಾಷೆಯಲ್ಲಿ ಸಾಮಾಜಿಕ ಚಹರೆಗಳು ಭಾಷಾ ಬಳಕೆಯ ಪೂರಕ ನೆಲೆಗಳು, ಸಿನಿಪದಕೋಶ ಮುಖ್ಯ ಅಧ್ಯಾಯಗಳಾಗಿವೆ.

**೧೬. ಎಂ.ಫಿಲ್ ಮಾರ್ಗದರ್ಶನ**

| | **ಅಭ್ಯರ್ಥಿಗಳು** | **ಶೀರ್ಷಿಕೆ** | **ಪದವಿಘೋಷಿಸಿದ ದಿನಾಂಕ** |
|---|---|---|---|
| ೧. | ಎನ್.ಶ್ರೀನಿವಾಸ | ಮೇದರು ಮತ್ತು ಕೊರಚರ ವೃತ್ತಿಪದಕೋಶ | ೧೯೯೭ |
| ೨. | ಶಂಕರ್ | ಕನ್ನಡ ದಿನಪತ್ರಿಕೆಗಳಲ್ಲಿ ಅನ್ಯಭಾಷಾಬಳಕೆ | ೨೦೦೮ |

**೧. ಮೇದರು ಮತ್ತು ಕೊರಚರ ವೃತ್ತಿ ಪದಕೋಶ (ಚಿತ್ರದುರ್ಗ ತಾಲೂಕನ್ನು ಅನುಲಕ್ಷಿಸಿ) ಎನ್.ಶ್ರೀನಿವಾಸ ೧೯೯೭**

ಚಿತ್ರದುರ್ಗ ತಾಲೂಕನ್ನು ಅನುಲಕ್ಷಿಸಿ ನಡೆದಿರುವ ಈ ಅಧ್ಯಯನದಲ್ಲಿ ಸಾಮಾಜಿಕ, ಆರ್ಥಿಕವಾಗಿ ಕೆಳಸ್ತರದ ಸಮುದಾಯಗಳಾದ ಮೇದರು ಮತ್ತು ಕೊರಚರ ಸಮಾಜೋ ಸಾಂಸ್ಕೃತಿಕ ನೆಲೆಗಳನ್ನು ಪರಿಚಯಿಸುವ ಹಾಗೂ ಇವರು ಬದುಕಿಗಾಗಿ ಅವಲಂಬಿಸಿರುವ ವೃತ್ತಿಗಳಾದ ಬಿದಿರು, ಬೆತ್ತ ಹಾಗೂ ಈಚಲಕಡ್ಡಿ, ಹುಲಿಕಡ್ಡಿಗಳಿಂದ ತಯಾರಿಸುವ ವಸ್ತುವಿವರ ನಿರ್ಮಾಣಕ್ಕಾಗಿ ಬಳಸುವ ಮೂಲಸಾಮಗ್ರಿ, ಉಪಕರಣ, ವೃತ್ತಿ ಸಂಬಂಧೀ ದೈವ, ನಂಬಿಕೆ, ಆಚರಣೆ ಹಾಗೂ ಮೇದರು ಮತ್ತು ಕೊರಚರ ನಡುವಿನ ಸಾಮ್ಯತೆ–ಭಿನ್ನತೆಗಳನ್ನೂ, ಅರ್ಥಸಹಿತ ಪದಕೋಶಗಳನೂ ಐದು ಅಧ್ಯಾಯಗಳಲ್ಲಿ ಸಂಗ್ರಹಿಸಿದ್ದಾರೆ.

**೨. ಕನ್ನಡ ದಿನಪತ್ರಿಕೆಗಳಲ್ಲಿ ಅನ್ಯಭಾಷಾಬಳಕೆ ಶಂಕರ್ ೨೦೦೮**

ಬರಹದಲ್ಲಿ ಭಾಷೆಯನ್ನು ಪ್ರತಿನಿತ್ಯವೂ ಬಳಸುವ ದಿನಪತ್ರಿಕೆಗಳು ವಿವಿಧ ಕ್ಷೇತ್ರಗಳ ಸುದ್ದಿ, ವಿಚಾರ, ವಿಮರ್ಶೆಗಳಿಗಾಗಿ ಹೊಸ ಭಾಷಿಕ ರಚನೆಗಳನ್ನು ಮಾಡುತ್ತಿರುತ್ತಾರೆ. ಇಂತಹ ಸಂದರ್ಭದಲ್ಲಿ ಅನಿವಾರ್ಯವಾಗಿಯಲ್ಲದೇ ಅನಗತ್ಯವಾಗಿಯೂ ಬೇರೆ ಬೇರೆ ಭಾಷೆಗಳಿಂದ ಪದಗಳನ್ನು ಬಳಸುತ್ತಿರುತ್ತಾರೆ. ದಿನಪತ್ರಿಕೆಗಳಲ್ಲಿ ಬಳಕೆಯಾಗುತ್ತಿರುವ ಇಂತಹ ಅನ್ಯ ಭಾಷಾ ಪದಬಳಕೆಯ ಸ್ವರೂಪವನ್ನು ಪತ್ರಿಕೆಗಳ ಶೀರ್ಷಿಕೆ, ವಿವಿಧ ಅಂಕಣಗಳನ್ನು ಪರಿಶೀಲಿಸಿ ವಿಶ್ಲೇಷಿಸಲಾಗಿದೆ. ಯಾವ ಯಾವ ಕ್ಷೇತ್ರಗಳಲ್ಲಿ ಇಂತಹ ಒಳಹರಿವು ಹೆಚ್ಚಾಗಿದೆ ಎಂಬುದನ್ನು ಈ ಅಧ್ಯಯನದಲ್ಲಿ ಗುರುತಿಸುವ ಪ್ರಯತ್ನ ಮಾಡಲಾಗಿದೆ.

**೧೭. ನಿರ್ವಹಿಸಿದ ಇತರೆ ಕೆಲಸಗಳು**

**೧. ಆಡಳಿತಾತ್ಮಕ ಕೆಲಸಗಳು**

**೧. ಸಹಾಯಕ ಕುಲಸಚಿವ**
**೨. ನಿರ್ದೇಶಕ ಅಧ್ಯಯನಾಂಗ**
**೩. ಎನ್.ಇ.ಟಿ ತರಬೇತಿ ಕೇಂದ್ರದ ಸಂಚಾಲಕ**
**೪. ವಿಭಾಗದ ಮುಖ್ಯಸ್ಥ**

**೨. ಹೆಚ್ಚಿನ ಜವಾಬ್ದಾರಿಗಳು**

**೨. ವಿಶ್ವವಿದ್ಯಾಲಯ ನಿಯೋಜಿಸಿದ ವಿವಿದ ಸಮಿತಿಗಳ ಸದಸ್ಯ, ಸಂಚಾಲಕ ಇತ್ಯಾದಿ**



PDF created with pdfFactory trial version www.pdffactory.com